(16) The Inconvelnence caused to the Villagers due to application of the Provisions of the Karnataka Land (Prevention) Fragmentation Act, 1983

ಶ್ರೀ ಎಂ. ಎಂ. ನಾನಯ್ಯ.—ಅಧ್ಯಕ್ಷರೇ,

"The application of the Provisions of the Karnataka Land (Prevention) Fragmentation Act, 1983 to the District of Kodagu has caused great inconvience and unnecessary harassment to the rural poor and small land holders in disposing of their land for the local necessity and even in the process of sharing the property among the family members, finds it disadvantageous to their peaceful enjoyment of the land.

Hence we call upon the Government to take remedial measures by exempting the District of Kodagu from the application of the Provision of the said Act as it has been done to theDistrict of South Kanara and North Canara vide notification No. RD/5/TCO/83 dated 24-6-83." ಇದರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮಂತ್ರಿ ಸಂಸದೀಯ ವ್ಯವಹಾರಗಳ ಸಚಿವರು).—ಈಗಿರುವ ಕಾನೂನಿನಿಂದ ತೊಂದರೆಯಾಗುತ್ತಿದೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗೆ ಮಾಡಿರುವ ಹಾಗೆ ಕೊಡಗಿಗೂ ಸಹ ಎಗ್ಸೆಂಪ್ಷನ್ ಕೊಡಿ ಎಂದು ಕೇಳುತ್ತಿದ್ದಾರೆ.....

ಉಪಾಧ್ಯಕ್ಷರು.—ಇದರ ಪರಿಹಾರಕ್ಕೆ ಅವಕಾಶ ಇದೆಯೆಂದು ಕಾಣಿಸುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ತಾತ್ಪರ್ಯ ಎಂದರೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಸಹಾಯವಾಗುವಂತೆ ಕಾನೂನನ್ನು ಬದಲಾವಣೆ ಮಾಡಿದ್ದೀರಿ. ಇದೇ ಬದಲಾವಣೆಯನ್ನು ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಗೂ ಅನ್ವಯಿಸುವಂತೆ ಏತಕ್ಕೆ ಮಾಡಬಾರದು? ನಮ್ಮ ಕೊಡಗಿಗೆ ಏತಕ್ಕೆ ಮಾಡಬಾರದೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಇದರ ಸಾಧಕ ಬಾಧಕಗಳನ್ನು ನೋಡಿ ಈ ವಿಚಾರವನ್ನು ತೀವ್ರವಾಗಿ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಎಂ. ನಾಣಯ್ಯ.—ಸ್ವಾಮಿ, ನಮ್ಮ ಭಾಗದಲ್ಲಿ ಇದರಿಂದ ಬಹಳಷ್ಟು ಪೆಟ್ಟಾಗಿದೆ. ಆದ್ದರಿಂದ ನಮ್ಮ ಭಾಗಕ್ಕೆ ಈ ವಿನಾಯಿತಿಯನ್ನು ಕೊಡಬೇಕು.

ಶ್ರೀ ವಿ. ಎಸ್. ಆಚಾರ್ಯ.—ಕೊಡಗಿನಂಥ ಪ್ರದೇಶದಲ್ಲಿ ಎತ್ತರ, ತಗ್ಗು...

ಉಪಾಧ್ಯಕ್ಷರು.—ಎಲ್ಲ ಜಿಲ್ಲೆಗಳಲ್ಲೂ ಈ ಒಂದು ಪರಿಸ್ಥಿತಿ ಇರುವುದರಿಂದ ಈ ವಿನಾಯಿತಿಯನ್ನು ಎಲ್ಲ ಕಡೆಗೂ ಕೊಡುವಂತೆ ಕ್ರಮ ತೆಗೆದುಕೊಳ್ಳಿ ಎಂದು ನಾನೇ ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸರ್ಕಾರ ಈ ವಿಚಾರವನ್ನು ಪರಿಶೀಲಿಸುತ್ತದೆಂದು ನಾನು ಈಗಾಗಲೇ ಹೇಳಿದ್ದೇನೆ.

(೧೨) ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಅನಿಲ್ ಮಲ್ಲೋತ್ರ, ಎನ್ನುವವರಿಗೆ ಯಾರೋ ಚೂರಿಯಿಂದ ಹೊಡೆದಿರುವ ಬಗ್ಗೆ.

ಶ್ರೀ ಬಸವರಾಜ ಪಾಟೀಲ್.—ಮಾನ್ಯ ಅಧ್ಯಕ್ಷರೆ, ತಾರೀಖು ೧೧-೪-೮೯ರಂದು ಅಂದರೆ ನಿನ್ನೆ ಇದೇ ಬೆಂಗಳೂರು ನಗರದ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ ಎದುರುಗಡೆ ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಅನಿಲ್ ಮಲ್ಲೋತ್ರ ಎನ್ನುವವರಿಗೆ ಯಾರೋ ಚೂರಿಯಿಂದ ಹೊಡೆದಿದ್ದಾರೆ. ಈಗ ಆತ ಆಸ್ಪತ್ರೆಯಲ್ಲಿ ಗುಣಮುಖನಾಗುತ್ತಿದ್ದಾನೆ. ತನ್ನ ಜೀವಕ್ಕೆ ಮುಂದೆ ಹಾನಿಯಾಗಬಹುದೆಂದು ಈ ಹಿಂದೆಯೇ ಪೋಲೀಸ್ ಕಂಪ್ಲೈಂಟ್ ನು. ಕೊಟ್ಟಿದ್ದಾನೆ. ಈ ಘಟನೆ ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ ಎದುರುಗಡೆಯಲ್ಲೇ ನಡೆದಿದೆ.

ಹಿಂದಿನ ಸರ್ಕಾರದ ಚಾಕು ಚೂರಿ ಸಂಸ್ಕೃತಿಯನ್ನು ತಪ್ಪಿಸುತ್ತೇವೆಂದು ಹೇಳುತ್ತಿದ್ದ ಈ ಸರ್ಕಾರ ತನ್ನ ಅವಧಿಯಲ್ಲೇ ಇದನ್ನು ಇನ್ನೂ ಜಾಸ್ತಿ ಮಾಡುತ್ತಿದೆ. ಇದೊಂದೇ ಅಲ್ಲ. ಉದಾಹರಣೆ ಹೇಳುವುದಾದರೆ ಹುಮ್ನಾಬಾದ್ ತಾಲೂಕಿನಲ್ಲಿ ಒಂದೇ ಊರಿನಲ್ಲಿ ಕೇವಲ ೩ ತಿಂಗಳಲ್ಲಿ ೫ ಕೊಲೆಗಳಾಗಿವೆ. ಇವತ್ತು ಜನರಲ್ಲಿ ಬಹಳ ಭೀತಿ ಉಂಟಾಗಿದೆ. ಎಂ. ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗೆ ಚೂರಿಯಿಂದ ಇರಿದಿರುವುದರಿಂದ ಆ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಮನಸ್ಸಿನಲ್ಲಿ ಒಂದು ಭಯ ಉಂಟಾಗಿದೆ. ಇನ್ನು ಮುಂದೆ ಈ ರೀತಿ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಬೇಕು. ಹಾಗೆ ನೋಡಿಕೊಂಡರೆ ಒಳ್ಳೆಯ ಜನರಿಗೆ ಜೀವನ ನಡೆಸಲು ಅವಕಾಶವನ್ನು ಮಾಡಿಕೊಟ್ಟಂತೆ ಆಗುತ್ತದೆ. ಇಲ್ಲದೇ ಹೋದರೆ ಗೂಂಡಾಗಳಿಗೆ ಇನ್ನೂ ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಕಾಂಗ್ರೆಸ್ (ಐ) ಸರ್ಕಾರದಲ್ಲಿದ್ದ ಚಾಕು ಚೂರಿ ಸಂಸ್ಕೃತಿ ನಮ್ಮ ಸರ್ಕಾರ ಬಂದಮೇಲೆ ಹೋಗಿದೆ ಎಂದು ಹೇಳಿದ್ದೀರಿ. ಆದರೆ ಅದು ಇನ್ನೂ ಇದೆ, ಇದನ್ನು ತಾವು ತಿಳಿದುಕೊಂಡು ಇನ್ನು ಮುಂದೆ ಈರೀತಿ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ, ಇದೇ ವಿಚಾರಕ್ಕೆ ಸಂಬಂಧಪಟ್ಟಂತೆ ನಾನೂ ಸಹಿ ಯನ್ನು ಮಾಡಿ ಕಳುಹಿಸಿರುವುದರಿಂದ ನನಗೂ ಮಾತನಾಡಲು ತಾವು ಅವಕಾಶವನ್ನು ಕಲ್ಪಿಸಿಕೊಡ ಬೇಕು. ನಿನ್ನೆಯ ದಿವಸ ನಾನೂ ಕೂಡ ಆಸ್ಪತ್ರೆಗೆ ಹೋಗಿ ಆ ಹುಡುಗನನ್ನು ನೋಡಿಕೊಂಡು ಬಂದಿದ್ದೇನೆ. ಇಂಥ ಘಟನೆಗಳಾಗುವುದು ಇದೇ ಮೊದಲನೇ ಸಾರಿ ಏನೂ ಅಲ್ಲ. ಇಂಥಾದ್ದು ಆಗುತ್ತಲೇ ಇರುತ್ತದೆ. ಈ ಎಂ ಎಸ್. ರಾಮಯ್ಯ ಕಾಲೇಜಿನಲ್ಲಿ ಇದು ಎರಡನೇ ಸಾರಿ ಆಗಿದೆ. ನನ್ನ ಪ್ರಾಣಕ್ಕೆ ಧಕ್ಕೆಯಾಗುವ ಸಂಭವ ಇದೆಯೆಂದು ಈ ವಿದ್ಯಾರ್ಥಿ ಹತ್ತಾರುಸಾರಿ ಕಂಪ್ಲೈಂಟ್ನ್ನು ಕೊಟ್ಟಿದ್ದರೂ ಇದರ ಬಗ್ಗೆ ಪೋಲೀಸರು ಸೂಕ್ತ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಪ್ರಕರಣ ಆದಮೇಲೆ ಆ ಕಾಲೇಜಿನಲ್ಲಿ ಸುಮಾರು ೪೦೦ ಜನ ವಿದ್ಯಾರ್ಥಿಗಳು ಮುಷ್ಕರ ಕೂತಿದ್ದಾರೆ. ಈ ಕಾಲೇಜಿನಲ್ಲಿ ಕೇವಲ ನಮ್ಮ ಕರ್ನಾಟಕದ ವಿದ್ಯಾರ್ಥಿಗಳು ಮಾತ್ರ ಇಲ್ಲ. ಇಡೀ ಇಂಡಿಯಾ ದೇಶ ದಲ್ಲಿರತಕ್ಕ ಎಲ್ಲ ರಾಜ್ಯಗಳವರೂ ಇಲ್ಲಿದ್ದಾರೆ. ಅಷ್ಟೇ ಅಲ್ಲ ಎಲ್ಲ ರಾಜ್ಯದ ಜನರೂ ಈ ಬೆಂಗಳೂರಿನಲ್ಲಿ ದ್ದಾರೆ. ಇಂಥ ದೊಡ್ಡ ಬೆಂಗಳೂರು ನಗರದಲ್ಲಿ ಅದರಲ್ಲೂ ಪೋಲಿಸ್ ಇಲಾಖೆಯ ಉನ್ನತ ಅಧಿಕಾರಿ ಐ.ಜಿ.ಪಿ.ಯವರು ಇರತಕ್ಕಂಥ ಊರಿನಲ್ಲಿ ಈರೀತಿ ಕೊಲೆಯಾಗಿದೆ ಎಂದರೆ ನಿಜಕ್ಕೂ ತಲೆತಗ್ಗಿಸಬೇಕು. ಆದರೆ ಇನ್ನು ಮುಂದಾದರೂ ಈರೀತಿಯ ಕೊಲೆಗಳಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಇವತ್ತು ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಸ್ಟೈಕ್ ಆಗಿತ್ತಿದೆ, ಅಲ್ಲಿ ಇನ್ನೂ ಭಯದ ವಾತಾವರಣ ಇದ್ದೇ ಇದೆ. ಆ ಕಾಲೇಜಿನ ಸಂಸ್ಥಾಪಕರಾದ ರಾಮಯ್ಯನವರಿಗೂ ಕೂಡ ಬೆದರಿಕೆಯ ಪತ್ರಗಳು ಬರುತ್ತಿವೆ. ಅಲ್ಲಿ ಕೆಲವು ವಿದ್ಯಾರ್ಥಿಗಳು ತಮ್ಮ ತಮ್ಮಲ್ಲೇ ಹೊಡೆದಾಡುತ್ತಿದ್ದಾರೆ. ಇಷ್ಟೆಲ್ಲಾ ಗಲಾಟೆಗಳು ಆಗುತ್ತಿದ್ದರೂ ಮಾನ್ಯ ಕಾನೂನು ಮಂತ್ರಿಗಳು ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ನಾನು ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಆದರೆ ಇದನ್ನು ಬೇಡವೆಂದು ತಾವು ಹೇಳುತ್ತಿದ್ದೀರಿ. ನಾನಾದರೂ ಹೇಳುತ್ತೇನೆ, ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕಾನೂನು ವ್ಯವಸ್ಥೆ ತೀರಾ ಹದಗೆಟ್ಟುಹೋಗಿದೆ.

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರೂ ಮತ್ತು ಮಾನ್ಯ ಬಸವರಾಜ ಪಾಟೀಲ್‌ರವರೂ ಸರ್ಕಾರದ ಗಮನವನ್ನು ಸೆಳೆಯುವ ಸಲುವಾಗಿ ಒಂದು ಸೂಚನೆಯನ್ನು ಏನಾ ತಂದಿದ್ದಾರೆಂದರೆ, ಇದೇ ಬೆಂಗಳೂರಿನಲ್ಲಿರುವ ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ಓದುತ್ತಿದ್ದ ಒಬ್ಬ ವಿದ್ಯಾರ್ಥಿಗೆ ಯಾರೋ ಬಂದು ಚೂರಿಯನ್ನು ಹಾಕಿದ್ದಾರೆ ಎಂಬುದು. ಅದೃಷ್ಟವಶಾತ್ ಆ ವಿದ್ಯಾರ್ಥಿ ಬದುಕಿಕೊಂಡಿದ್ದಾನೆ ಈ ಕೃತ್ಯವನ್ನು ಯಾರು ಯಾರು ಮಾಡಿದ್ದಾರೆ ಅವರಮೇಲೆ ಕೇಸನ್ನು ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ನಾವು ಕ್ರಮ ಕೈಗೊಂಡಿದ್ದೇವೆ ತನಿಖೆಯ ವರದಿ ಏನು ಬರುತ್ತದೆ ಅದರ ಪ್ರಕಾರ ನಾವು ಎಷ್ಟು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಜೊತೆಗೆ ರಾಮಯ್ಯ ಕಾಲೇಜಿನಲ್ಲಿ ಕೇವಲ ಕರ್ನಾಟಕದ ವಿದ್ಯಾರ್ಥಿಗಳು ಮಾತ್ರ ಇಲ್ಲ. ಬೇರೆ ಬೇರೆ ರಾಜ್ಯಗಳ ವಿದ್ಯಾರ್ಥಿಗಳೂ ಇದ್ದಾರೆ. ನನಗೆ ಗೊತ್ತಿರುವಂತೆ ರ್ಯಾಂಗಿಂಗ್ ಕೂಡ ಅಲ್ಲಿಯೇ ಪ್ರಾರಂಭವಾಯಿತು. ಇದು ಒಂದು ಪ್ರೈವೇಟ್ ಕಾಲೇಜು. ಈಗ ಆ ಹಾಸ್ಟೆಲ್ ವಾರ್ಡನ್. ಚೌದ್ರಿ ಎನ್ನುವವನನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಹೇಳಿದ್ದಾರೆ. ಅವನನ್ನು

ತೆಗೆಯುವಂತೆ ಹೇಳುತ್ತೇವೆ. ಒಂದುವೇಳೆ ಮ್ಯಾನೇಜ್‌ಮೆಂಟ್‌ನವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರದವರು ನಾವೇ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆಂದು ಹೇಳಬಯಸುತ್ತೇನೆ. ವಿದ್ಯಾ ಸಂಸ್ಥೆಗಳಲ್ಲಿ ಇಂಥ ಪ್ರಕರಣಗಳು ಆಗಬಾರದೆಂದು ನನ್ನ ಉದ್ದೇಶ. ಇಷ್ಟರಲ್ಲೇ ಇದಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿ ಮಸೂದೆ ಕೂಡ ಸಭೆಯ ಮುಂದೆ ಬರಲಿದೆ. ಇದು ಬಂದರೆ ಖಾಸಗೀ ಕಾಲೇಜುಗಳಲ್ಲಿ ಇಂಥಾದ್ದು ಆಗದಂತೆ ಒಂದು ಕಡಿವಾಣ ವನ್ನು ಹಾಕಿದಂತಾಗುತ್ತದೆ. ಇದರಲ್ಲಿ ಯಾರನ್ನೂ ರಕ್ಷಣೆ ಮಾಡುವುದು ಬೇಡ. ಮತ್ತು ಈ ಮಸೂದೆ ಬಂದಾಗ ಯಾರೂ ಕೂಡ ಅದರ ಬಗ್ಗೆ ರಾಜಕೀಯವನ್ನು ಮಾಡುವುದೂ ಬೇಡವೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ನಿನ್ನೆ ನಡೆದಿರತಕ್ಕ ಪ್ರಕರಣದ ಬಗ್ಗೆ ಯಾರು ಅಪರಾಧಿ ಇದ್ದಾನೆ ಅವನ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.— ಹಾಗಾದರೆ ಈಗ ಅಲ್ಲಿ ಮುಷ್ಕರ ಕುಳಿತಿರತಕ್ಕ ವಿದ್ಯಾರ್ಥಿಗಳನ್ನು ಸಂತೈಸುವುದಕ್ಕೆ ಮಂತ್ರಿಗಳ ಪೈಕಿ ಯಾರಾದರೂ ಹೋಗಿ ಬರಬೇಕೆಂದು ಹೇಳಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.— ಈಗ ನನಗೆ ಕೆಲಸ ಇದೆ. ಆಮೇಲೆ ನಾನೇ ಹೋಗಿ ಅದನ್ನು ನೋಡುತ್ತೇನೆ.

ಗಂಗಾವತಿ ತಾಲ್ಲೂಕ್, ಹೊಸಕೆರೆ ಕ್ಯಾಂಪಿನಲ್ಲಿ ವರದಕ್ಷಿಣೆ ವಿಚಾರದಲ್ಲಿ ಕೊಲೆಯಾಗಿರುವ ಬಗ್ಗೆ.

ಶ್ರೀ ಸಿ. ಜಿ. ಗಚ್ಚಿನವಾರ್.—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ. ಇದೇ ತಿಂಗಳು ಅಂದರೆ ದಿನಾಂಕ ೫-೪-೧೯೮೪ರ ರಂದು ಗಂಗಾವತಿ ತಾಲ್ಲೂಕು ಹೊಸ ಕೆರೆ ಕ್ಯಾಂಪಿನಲ್ಲಿ ವಾಸ ಮಾಡತಕ್ಕ ನಾರಾಯಣ ಕಮ್ಮ ಅವರ ಮಗಳು ಚಂದ್ರಾವತಿಯನ್ನು ವರದಕ್ಷಿಣೆ ವಿಚಾರದಲ್ಲಿ ಕೊಲೆ ಮಾಡಲಾಗಿದೆ. ಸಿಂಧನೂರು ತಾಲ್ಲೂಕು ಡಾಲಿಹಾಳ ಕ್ಯಾಂಪಿನಲ್ಲಿರುವ ಮಂಳ್ಳಿಪುಡಿ ವಿಷ್ಣುವರ್ಧನ ಮೂರ್ತಿ ಎಂಬುವರಿಗೆ ಕೊಟ್ಟು ಎರಡು ವರ್ಷಗಳ ಹಿಂದೆ ಮದುವೆ ಮಾಡಲಾಗಿತ್ತು, ಲಗ್ನ ಮಾಡುವಾಗ ೨೦,೦೦೦ ವರದಕ್ಷಿಣೆ ಕೊಡುತ್ತೇನೆಂದು ಒಪ್ಪಿ, ಲಗ್ನದ ಕಾಲಬಲ್ಲಿ ೨೦,೦೦೦ ಕೊಟ್ಟು, ೧೦,೦೦೦ ಆ ಮೇಲೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ, ೧೦,೦೦೦ ರೂಪಾಯಿ ಕೊಡದಿದಕ್ಕಾಗಿ ಎರಡು ವರ್ಷಗಳಿಂದ ಪೀಡಿಸಿ ೫-೪-೮೪ರಂದು ರಾತ್ರಿ ೯-೩೦ಕ್ಕೆ ಆಕೆಯ ಗಂಡ ಮಂತ್ತು ಮಾವ ಸೇರಿಕೊಂಡು ಆಕೆಯನ್ನು ಕುಡುಗೋಲು ಮತ್ತು ಬಿದಿರುಕೋಲಿನಿಂದ ಹೊಡೆದು ಕೊಲೆ ಮಾಡಿದ್ದಾರೆ. ಈ ಅಪಾದನೆಯನ್ನು ಮುಚ್ಚಿಹಾಕುವುದಕ್ಕಾಗಿ ಹೆಣವನ್ನು ಸುಟ್ಟುಹಾಕಿದ್ದಾರೆ. ಸ್ಥಳೀಯ ಪೋಲೀಸ್ ಅಧಿಕಾರಿಗಳ ತಾತ್ಸಾರದಿಂದ ಇಂಥ ಘಟನೆಯಾಗಿದೆ. ಇದರ ತೀವ್ರತೆಯನ್ನು ಗಮನಿಸಿ, ಸಿ.ಓ.ಡಿ. ತನಿಖೆಗೆ ಆಜ್ಞೆ ಮಾಡಿ, ಮೃತಳ ಕುಟುಂಬದವರಿಗೆ ನ್ಯಾಯ ದೊರಕಿಸಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಇದು ಬಹಳ ಆಶ್ಚರ್ಯದ ಸಂಗತಿ. ವರದಕ್ಷಿಣೆ ಕೊಡದ ಕಾರಣದಿಂದ ಸ್ವಂತ ಗಂಡ ತನ್ನ ಹೆಂಡತಿಯನ್ನು ಕೊಲೆ ಮಾಡಿ, ಬೆಂಕಿ ಹಚ್ಚಿದುವಂಥ ಕೇಸಿನ ಬಗ್ಗೆ ಸರ್ಕಾರ ತಕ್ಷಣ ಗಮನ ಕೊಡಲಿಲ್ಲ ಅಂದರೆ, ಗೃಹಖಾತೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆ? ಇದರ ಬಗ್ಗೆ ಸರ್ಕಾರದಿಂದ ಏನು ಉತ್ತರ ಬರುತ್ತದೆ ಎಂಬುದನ್ನು ನಾವು ಕೇಳಬೇಡವೆ ?

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಹತ್ತಿರ ವಿವರ ಇಲ್ಲ. ರಾಜ್ಯ ಗೃಹ ಮಂತ್ರಿಯವರಿಗೆ ಕರೆ ಕಳುಹಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರೀತಿ ಹೇಳಿದರೆ ಹೇಗೆ ಹೆಣ್ಣು ಮಗಳ ಗತಿ ಏನು? ಸಭೆ ಮುಗಿದ ಮೇಲೆ ನಾವೆಲ್ಲಾ ಊರಿಗೆ ಹೋಗುತ್ತೇವೆ, ನಿರಪರಾಧಿ ಹೆಣ್ಣು ಮಕ್ಕಳ ಗತಿ ಏನು? ಮಾನ್ಯ ಮಂತ್ರಿಯವರು ಸರಿಯಾದ ಉತ್ತರ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ರಾಜ್ಯ ಗೃಹ ಮಂತ್ರಿಯವರಿಗೆ ಕರೆಕಳುಹಿಸುತ್ತೇನೆ. ಸಾಧ್ಯವಾದರೆ ಸಭೆಗೆ ತಕ್ಷಣ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ನೇಣು ಹಾಕಬೇಕೆಂದರೆ ಹಾಕಬೇಕು. ಆಗ ಅವರಿಗೆ ಸಮಾಧಾನವಾಗಬಹುದು.